ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 273
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 06.12.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಮಂಡ್ಯ ತಾಲೂಕು, ಕೊತ್ತತ್ತಿ ಹೋಬಳಿ, ಗುತ್ತಲು ಗ್ರಾಮ ಸ.ನಂ.497/6 (ಪ್ರಸ್ತುತ 497/6 ಎ2) ರಲ್ಲಿನ 0.38 ಗುಂಟೆ ಮತ್ತು 497/5ಬಿ ರಲ್ಲಿನ 0.07 ಜಮೀನು ಮೈಸೂರು ಸಕ್ಕರೆ ಕಂಪನಿ ಕೆಲಸಗಾರರ ಸಂಘ ರಿ.ನಂ.39/41 ಇದರ ಅಧ್ಯಕ್ಷರ ಹೆಸರಿನಲ್ಲಿ ದಿನಾಂಕ:17.03.1960 ರಲ್ಲಿ ನೋಂದಣಿ ಸಂಖ್ಯೆ ಕ್ರಮವಾಗಿ 6833 ಮತ್ತು 6834 ರಂತೆ ನೋಂದಣಿ ಆಗಿ ಕ್ರಯ ಆಗಿದ್ದು, ಸದರಿ ಸಂಘವು ಅಸ್ತಿತ್ವದಲ್ಲಿಲ್ಲದ ಕಾರಣ ಮೇಲ್ಕಂಡ ಎರಡು ಸ್ವತ್ತುಗಳು "PRINCIPALS OF LAW OF ESCHEAT" ನಿಯಮದಂತೆ ಸರ್ಕಾರದ ಸುಪರ್ದಿಗೆ ಪಡೆದುಕೊಳ್ಳುವ ಸಂಬಂಧ ಉಪ ವಿಭಾಗಾಧಿಕಾರಿ, ಮಂಡ್ಯ ಇವರಿಗೆ ಸದರಿ ಸ್ವತ್ತುಗಳ ವರ್ಗಾವಣೆ ಮತ್ತು ಹಕ್ಕಿನ ಬಗ್ಗೆ ಸಮರ್ಪಕ ವರದಿ ನೀಡುವಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಇವರು ಸೂಚಿಸಿರುವುದು ನಿಜವೇ;	ಹೌದು.
(ಆ)	ಹಾಗಿದ್ದಲ್ಲಿ, ಸದರಿ ಸ್ವತ್ತುಗಳನ್ನು ಸರ್ಕಾರದ ವಶಕ್ಕೆ ಪಡೆಯುವಲ್ಲಿ ಪರಿಶೀಲನಾ ವರದಿಯು ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ;	ಇಲ್ಲ.
(ಇ)	ಇಲ್ಲವಾದಲ್ಲಿ, ಸದರಿ ಸ್ವತ್ತುಗಳನ್ನು ಯಾವ ಕಾಲ ಮಿತಿಯೊಳಗೆ ಸರ್ಕಾರದ ಸುಪರ್ದಿಗೆ ಪಡೆಯಲು ಕ್ರಮ ವಹಿಸಲಾಗುವುದು;	ಉಪವಿಭಾಗಾಧಿಕಾರಿಯವರು ಸಲ್ಲಿಸಿರುವ ವರದಿಯಲ್ಲಿ ವರ್ಗಾವಣೆ ಹಾಗೂ ಹಕ್ಕಿನ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ ನ್ಯೂನತೆಗಳನ್ನು ಸರಿಪಡಿಸಿ ವಿವರವಾದ ವರದಿ ನೀಡುವಂತೆ ಉಪವಿಭಾಗಾಧಿಕಾರಿ, ಮಂಡ್ಯ ಉಪವಿಭಾಗ, ಮಂಡ್ಯ ಇವರಿಗೆ ಮಂಡ್ಯ ಜಿಲ್ಲಾಧಿಕಾರಿಯವರು ಸೂಚಿಸಿರುತ್ತಾರೆ. ಉಪ ವಿಭಾಗಾಧಿಕಾರಿ-ಯವರಿಂದ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ, ಲೋಪವೆಸಗಿರುವುದು ಕಂಡು ಬಂದಲ್ಲಿ ವಿಳಂಬಕ್ಕೆ ಮತ್ತು ಬೇಜವಾಬ್ದಾರಿಗೆ ಕಾರಣರಾದವರ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.
(ಈ)	ಮಂಡ್ಯ ನಗರದ ಹೃದಯ ಭಾಗದಲ್ಲಿರುವ ಸದರಿ ಮೇಲ್ಕಂಡ ಸ್ವತ್ತುಗಳ ಪೈಕಿ ಸರ್ವೆ ನಂ.497/6 ರಲ್ಲಿನ 0-38 ಗುಂಟೆ ವಿಸ್ತೀರ್ಣದ ಭೂಮಿಯನ್ನು ಸಂಬಂಧಪಡದ ವ್ಯಕ್ತಿಗಳು ಅಕ್ರಮವಾಗಿ ಮಾರಾಟ ಮಾಡುವ ಪ್ರಕ್ರಿಯೆಯು ಜಿಲ್ಲಾಡಳಿತದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	
(ಉ)	ಸದರಿ ಮೇಲ್ಕಂಡ ಸ್ವತ್ತುಗಳನ್ನು ಸರ್ಕಾರದ ಸುಪರ್ದಿಗೆ ಪಡೆಯಲು ದೀರ್ಘಕಾಲದ ವಿಳಂಬಕ್ಕೆ ಹಾಗೂ ಬೇಜವಾಬ್ದಾರಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಸರ್ಕಾರವು ಯಾವ ಕಾಲಮಿತಿಯೊಳಗೆ, ಯಾವ ಕ್ರಮಗಳನ್ನು ಕೈಗೊಳ್ಳಲಿದೆ?	

(ಕಡತ ಸಂಖ್ಯೆ:ಕಂಇ 57 ಎಲ್‌ಜಿವೈ 2023)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು